ಶ್ರೀ ವಿ. ಸುನಿಲ್ ಕುಮಾರ್:– ಶುಲ್ಕ ವಸೂಲಾತಿಯಲ್ಲಿ ದುರುಪಯೋಗವಾಗಿಲ್ಲವೆಂದು ಇದರಲ್ಲಿ ಇದೆ. ನಮ್ಮ ಹತ್ತಿರ ರಶೀದಿ ಕೂಡ ಇದೆ.

ಶ್ರೀ ಟಿ.ಬಿ. ಜಯಚಂದ್ರ:– ನಿಮ್ಮ ಹತ್ತಿರ ಏನೇನು ಮಾಹಿತಿ ಇದೆಯೋ ಅವೆಲ್ಲವನ್ನು ಕಳುಹಿಸಿಕೊಡಿ. ಅದರ ಬಗ್ಗೆ ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ವಿ. ಸುನಿಲ್ ಕುಮಾರ್:– ಮಾನ್ಯ ಅಧ್ಯಕ್ಷರ ಮುಖಾಂತರ ತಮಗೆ ಕಳುಹಿಸಿಕೊಡುತ್ತೇನೆ. ಅದರ ಬಗ್ಗೆ ತನಿಖೆ ಮಾಡಿಸಿ.

ಅಧ್ಯಕ್ಷರು:– ತನಿಖೆ ಮಾಡಿಸಿ. You must operate with a firm hand. ಇಲ್ಲದಿದ್ದರೆ ಆಗುವುದಿಲ್ಲ. ಏಕೆಂದರೆ, ಅಲ್ಲಿ District Food Officer ಮತ್ತೆ ಇನ್ನೂ ಕೆಲವರು ಸೇರಿಕೊಂಡು ಕೆಟ್ಟು ಹೋಗಿದ್ದಾರೆ.

ಶ್ರೀ ವಿ. ಸುನೀಲ್ ಕುಮಾರ್:– ಇದನ್ನು ಪತ್ತೆ ಹಚ್ಚಿದ ಅಧಿಕಾರಿಗಳನ್ನು ಬಹಳ ದೊಡ್ಡ ಪ್ರಮಾಣದಲ್ಲಿ ವರ್ಗಾವಣೆ ಮಾಡಿದ್ದಾರೆ.

ಅಧ್ಯಕ್ಷರು:– ಆ ಎಲ್ಲಾ ಮಾಹಿತಿಗಳನ್ನು ಅವರಿಗೆ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ:– ಆ ಮಾಹಿತಿಗಳನ್ನು ಕೊಡಿ. ಖಂಡಿತವಾಗಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

2. ವಿಷಯ:– ರಾಜ್ಯದಲ್ಲಿರುವ ಪಶು ಆಸ್ಪತ್ರೆಗಳಲ್ಲಿ ಔಷಧಿಗಳಿಗೆ ಸಾಕಷ್ಟು ಬೇಡಿಕೆ ಇದ್ದರೂ ಸಹ ಅದರ ಅಗತ್ಯತೆಗೆ ತಕ್ಕಂತೆ ಔಷಧಿಗಳ ಪೂರೈಕೆ ಆಗದಿರುವುದರ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಪಶು ಸಂಗೋಪನಾ ಸಚಿವರಲ್ಲಿ ನೇರವಾಗಿ ಕೇಳುವುದೇನೆಂದರೆ, ಔಷಧಿಗಳು ಇವತ್ತಿನದಿವಸ ಪೂರೈಕೆ ಆಗಿದೆ. ಆದರೆ, ಬೇರೆ ಬೇರೆ ಜಿಲ್ಲೆಗಳಿಗೆ ಬೇರೆ ಬೇರೆ ರೀತಿಯ ಔಷಧಿಗಳು ಬೇಕಾಗುತ್ತದೆ. ಆದರೆ, ಇವತ್ತಿನದಿವಸ ಒಂದೇ ರೀತಿಯ ಔಷಧಿಗಳನ್ನು ಕೊಡುವುದರಿಂದ ಆಯಾಯ ಜಿಲ್ಲೆಗಳಿಗೆ ಬೇಕಾಗಿರುವ

ಔಷಧಿಗಳು ಸಿಗುವುದಿಲ್ಲ. ಆದ್ದರಿಂದ, ಆಯಾ ಜಿಲ್ಲೆಗಳಿಗೆ ಅಗತ್ಯ ಇರುವ ಔಷಧಿಗಳನ್ನು ಕೊಡುವುದರ ಜೊತೆಗೆ ಔಷಧಿಗಳ ಗುಣಮಟ್ಟದ ಬಗ್ಗೆ ದೂರು ಬರುತ್ತಿದೆ. ಏಕೆಂದರೆ, ಯಾವ ಕಂಪನಿಗಳು ಔಷಧಿಗಳನ್ನು ಪೂರೈಕೆ ಮಾಡುತ್ತಿವೆಯೋ ಆ ಕಂಪನಿಗಳು ಕೇವಲ ಸರ್ಕಾರಕ್ಕೆ ಮಾತ್ರ ಔಷಧಿಗಳನ್ನು ಪೂರೈಕೆ ಮಾಡುತ್ತಿವೆ. ಆದರೆ, ಈ ಔಷಧಿಗಳನ್ನು ಖಾಸಗಿಯಾಗಿ ಮಾರಾಟ ಮಾಡುತ್ತಿಲ್ಲ. ಖಾಸಗಿಯಾಗಿ ಮಾರಾಟ ಮಾಡದೆ ಕೇವಲ ಸರ್ಕಾರಕ್ಕೆ ಮಾತ್ರ ಕೊಡುತ್ತಿದ್ದಾರೆಂದರೆ ಅವರ ಔಷಧಿಯ ಗುಣಮಟ್ಟ ತಪ್ಪಾಗಿರಬಹುದು. ಆದ್ದರಿಂದ, Active principle ಅಂದರೆ, ಔಷಧಿಯಲ್ಲಿ ಕ್ರಿಯಾಶೀಲ ಮೂಲ ಅಂಶಗಳು ಎಂದು ಇರುತ್ತವೆ. ಇದರ ಬಗ್ಗೆ ಒಂದು ದೃಢೀಕರಣ ತೆಗೆದುಕೊಳ್ಳುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಇದರಿಂದ ಇವತ್ತಿನದಿವಸ ಬಹಳ ತೊಂದರೆಯಾಗಿದೆ. ಔಷಧಿಗಳ ಗುಣಮಟ್ಟ ಸರಿಯಾಗಿ ಇಲ್ಲದೆ ಇರುವುದರಿಂದ ಮೊನ್ನೆದಿವಸ 5 ಎಮ್ಮೆಗಳು ಸತ್ತು ಹೋದವು. 5 ಎಮ್ಮೆಗಳು ಸತ್ತು ಹೋಗಿದ್ದರಿಂದ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ. ಔಷಧಿಯ ಸಮಸ್ಯೆಯಿಂದ ಈ ರೀತಿ ಆಗುತ್ತಿವೆ ಎಂದು ನಮ್ಮ ಜಿಲ್ಲೆಯಾದ ಮಲೆನಾಡು ಭಾಗದಲ್ಲಿ ಕೇಳಿ ಬರುತ್ತಿವೆ. ಮಾನ್ಯ ಜಯಚಂದ್ರರವರು ಈ ಇಲಾಖೆಯ ಸಚಿವರಾಗಿರುವುದರಿಂದ ಈ ಬಗ್ಗೆ ಸರಿಯಾದ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಸಂಸದೀಯ ಮತ್ತು ಪಶು ಸಂಗೋಪನಾ ಸಚಿವರು):– ರಾಜ್ಯದಲ್ಲಿ 4112 ಪಶುವೈದ್ಯಕೀಯ ಸಂಸ್ಥೆಗಳಿದ್ದು, ಈ ಸಂಸ್ಥೆಗಳ ಮೂಲಕ ವಾರ್ಷಿಕ ಸರಾಸರಿ ಒಂದು ಕೋಟಿ ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಜಾನುವಾಗುರಗಳಿಗೆ ಚಿಕಿತ್ಸೆ ನೀಡಲು ವಾರ್ಷಿಕ ` 30.62 ಕೋಟಿಗಳ ಅನುದಾನ ಲಭ್ಯವಾಗುತ್ತಿದೆ. ಸದರಿ ಅನುದಾನದಲ್ಲಿ ವರ್ಷಕ್ಕೆ ಎರಡು ಬಾರಿ ದರ ನಿಗಡಿಪಡಿಸಿದ ದರಗುತ್ತಿಗೆ ಔಷಧಿ ಸರಬರಾಜುದಾರರಿಂದ ಔಷಧಿ ಮತ್ತು ರಾಸಾಯನಿಕಗಳನ್ನು ಖರೀದಿಸಿ ಪಶುವೈದ್ಯಕೀಯ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ. ಔಷಧಿ ಮತ್ತು ರಾಸಾಯನಿಕಗಳನ್ನು ದರಗುತ್ತಿಗೆ ನಿಗದಿಪಡಿಸುವಾಗ, ಖರೀದಿಸುವಾಗ ಹಾಗೂ

ಸರಬರಾಜು ಆದ ನಂತರ ಗುಣಮಟ್ಟ ಕಾಪಾಡುವಲ್ಲಿ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸಲಾಗುತ್ತಿದೆ. ಈ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಟೆಂಡರ್ ಆಹ್ವಾನ ಪರಿಶೀಲನಾ ಮತ್ತು ಅಂಗೀಕಾರ ಸಮಿತಿಯಲ್ಲಿ ರಾಜ್ಯ ಔಷಧಿ ನಿಯತ್ರಕರ ಪ್ರತಿನಿಧಿಯವರು ಸದಸ್ಯರಾಗಿದ್ದು. ಅವರು ಭಾಗವಹಿಸಿ ಅಭಿಪ್ರಾಯಗಳನ್ನು ಸೂಚಿಸುತ್ತಾರೆ. ಪಶುವೈದ್ಯಕೀಯ ಮಹಾವಿದ್ಯಾಲಯದ ಔಷಧಿಶಾಸ್ತ್ರ ವಿಭಾಗದ ಮುಖ್ಯಸ್ಥರು ಸದರಿ ಸಮಿತಿಗಳಿಗೆ ಸದಸ್ಯರಾಗಿದ್ದು ಅವರು ಸಹ ಭಾಗವಹಿಸಿ ಅಭಿಪ್ರಾಯಗಳನ್ನು ಸೂಚಿಸುತ್ತಾರೆ. ಇದಲ್ಲದೆ ರಾಜ್ಯದಲ್ಲಿರುವ ಪಶುವೈದ್ಯರು ಅವಶ್ಯವಿರುವ ಔಷಧಿಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸುತ್ತಾರೆ. ಹೀಗೆ ತಜ್ಞರಿಂದ ಕೂಡಿದ ಸಮಿತಿಯಲ್ಲಿ ಅನುಮೋದನೆಗೊಂಡ ಔಷಧಿಗಳನ್ನು ಮಾತ್ರ ಇ–ಟೆಂಡರ್ ಮುಖಾಂತರ ದರಗುತ್ತಿಗೆ ನಿಗದಿಪಡಿಸಲಾಗುತ್ತಿದೆ.
2. ಟೆಂಡರ್‌ನಲ್ಲಿ ಭಾಗವಹಿಸುವ ಎಲ್ಲಾ ಸರಬರಾಜುದಾರರು ಆಯಾ ಔಷಧಿಗಳು ಮಾರುಕಟ್ಟೆಯಲ್ಲಿ ಕನಿಷ್ಟ 3 ವರ್ಷಗಳಿಂದ ಲಭ್ಯವಿದೆ ಹಾಗೂ ಮಾರಾಟ ಮಾಡಿದ ಬಗ್ಗೆ ಸೂಕ್ತ ದಾಖಲಾತಿ ಒದಗಿಸುವುದನ್ನು ಕಡ್ಡಾಯವಾಗಿ ಪಾಲಿಸಲಾಗುತ್ತಿದೆ.
3. ಟೆಂಡರ್ ಪರಿಶೀಲನಾ ಸಮಿತಿಯ ಮೂಲಕ ದರಗುತ್ತಿಗೆ ನಿಗದಿಪಡಿಸಬೇಕಾದ ಔಷಧಿ ಮತ್ತು ರಾಸಾಯನಿಕಗಳ ಗುಣಮಟ್ಟವನ್ನು ಔಷಧಿ ನಿಯಂತ್ರಕರ ಮೂಲಕ ಕ್ರಿಯಾಶೀಲ ಮೂಲಾಂಶಗಳ (ಆಕ್ಟಿವ್ ಪ್ರಿನ್ಸಿಪಲ್) ವಿಶ್ಲೇಷಿಸಿದ ನಂತರವೇ ಪರಿಗಣಿಸಲಾಗುತ್ತಿದೆ. ಔಷಧಿ ಮತ್ತು ರಾಸಾಯನಿಕಗಳನ್ನು ಸರಬರಾಜು ಮಾಡುವ ದರಗುತ್ತಿಗೆದಾರರು ಸರಬರಾಜು ಸಮಯದಲ್ಲಿ ಔಷಧಿ ನಿಯಂತ್ರಕರ ವಿಶ್ಲೇಷಣಾ ವರದಿಯನ್ನು ನೀಡುತ್ತಾರೆ. ಹಾಗೂ ಪಶುವೈದ್ಯಕೀಯ ಕೇಂದ್ರಗಳಿಗೆ/ ಜಿಲ್ಲಾ

ಉಪ ನಿರ್ದೇಶಕರುಗಳ ಕಛೇರಿಗಳಿಗೆ ಔಷಧಿಗಳು ಸರಬರಾಜು ಆದ ನಂತರ, ಔಷಧಿ–ನಿಯಂತ್ರಕರು random ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ವರದಿ ನೀಡುತ್ತಾರೆ. ಸದರಿ ವರದಿಯಲ್ಲಿ ಗುಣಮಟ್ಟ ಸರಿಯಾಗಿದೆಯೆಂದು ಖಾತರಿಯಾದ ನಂತರವೇ ಔಷಧಿ ಸರಬರಾಜುದಾರರಿಗೆ ಹಣ ಸಂದಾಯ ಮಾಡಲಾಗುತ್ತಿದೆ. ಕಳಪೆ ಗುಣಮಟ್ಟದ್ದೆಂದು ಕಂಡುಬಂದಲ್ಲಿ ಮೊದಲೇ ಅವಕಾಶವಾಗಿ ಉತ್ತಮ ಗುಣಮಟ್ಟದ ಔಷಧಿ ಸರಬರಾಜು ಮಾಡಲು ತಿಳಿಸಿ ಪಡೆಯಲಾಗುತ್ತದೆ. ಹಾಗೂ ಸದರಿ ಔಷಧಿಯನ್ನು ಕಪ್ಪು ಪಟ್ಟಿಗೆ ಸೇರ್ಪಡಿಸಿ ಆ ಔಷಧಿಯನ್ನು ಪುನ: ಖರೀದಿಸಲಾಗುವುದಿಲ್ಲ. ಇದೇ ರೀತಿ ಒಂದೇ ಉತ್ಪಾದಕರ ಎರಡು ಔಷಧಿಗಳು ಕಳಪೆ ಮಟ್ಟದ್ದು ಎಂದು ವಿಶ್ಲೇಷಣಾ ವರದಿಯಲ್ಲಿ ಸಾಬೀತಾದಲ್ಲಿ ಅಂತಹ ಔಷಧಿ ಮತ್ತು ರಾಸಾಯನಿಕವನ್ನು ಕಪ್ಪು ಪಟ್ಟಿಗೆ ಸೇರಿಸಲಾಗುತ್ತಿದೆ. ಹೀಗೆ 2013–14 ನೇ ಸಾಲಿನಲ್ಲಿ ನಾಲ್ಕು ಔಷಧಿಗಳು ಕಳಪೆ ಮಟ್ಟದ್ದು ಎಂದು ಖಚಿತವಾಗಿದ್ದು. ಇಂತಹ ಔಷಧಿ ಸರಬರಾಜು ಮಾಡಿದ ಎರಡು ಔಷಧಿ ಉತ್ಪಾದಕ ಕಂಪನಿಗಳನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆ.

ಇಲಾಖಾ ಮಟ್ಟದಲ್ಲಿ ಮತ್ತು ಸರ್ಕಾರದ ಮಟ್ಟದಲ್ಲಿ ಪಶುವೈದ್ಯಕೀಯ ಕೇಂದ್ರಗಳಿಗೆ ಸರಬರಾಜು ಮಾಡಿದ ಔಷಧಿಗಳ ಗುಣಮಟ್ಟವು ಉತ್ತಮವಾಗಿರುವ ಬಗ್ಗೆ ಸರಬರಾಜಾಗುವ ಎಲ್ಲಾ ಔಷಧಿಗಳ ಹಾಗೂ ಸರಬರಾಜು ಮಾಡುವ ಎಲ್ಲಾ ಕಂಪನಿಗಳ ಬಗ್ಗೆ ನಿಗಾವಹಿಸಲಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಗುಣಮಟ್ಟದ ಬಗ್ಗೆ ಹೇಳಿದ್ದಾರೆ. ಆದರೆ, ಗುಣಮಟ್ಟವನ್ನು ನಾವು ಪರಿಶೀಲನೆ ಮಾಡುವುದಕ್ಕಾಗಿ ಅದರ samples ಅನ್ನು draw ಅನಂತರ ಅದನ್ನು ಟೆಸ್ಟ್ ಮಾಡಿ ತದನಂತರ

ಅದನ್ನು supply ಮಾಡುತ್ತೇವೆ. ಮೆಟೀರಿಯಲ್ ಸಪ್ಲೈ ಆದ ಮೇಲೂ ಕೂಡ ಅದನ್ನು ಟೆಸ್ಟ್ ಮಾಡತಕ್ಕಂಥ ಪದ್ಧತಿ ಇದೆ. ಔಷಧಿಯ ಗುಣಮಟ್ಟ ಸರಿಯಾಗಿ ಇಲ್ಲದೆ ಇರುವುದರಿಮದ 5 ಎಮ್ಮೆಗಳು ಸತ್ತು ಹೋದವು ಎಂದು ಮಾನ್ಯ ಸದಸ್ಯರು ಹೇಳಿರತಕ್ಕಂಥದರ ಬಗ್ಗೆ ನಿರ್ದಿಷ್ಟವಾಗಿ ವರದಿ ತರಿಸಿಕೊಂಡು ಅದರ ಬಗ್ಗೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು:– ಅದರ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಅವರಿಗೆ ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸರಬರಾಜು ಆಗಿರುವ ಔಷಧಿಯನ್ನು ಸರಿಯಾಗಿ ಪರೀಕ್ಷೆ ಮಾಡಬೇಕೆಂಬುದು ನನ್ನ ಅಪೇಕ್ಷೆ.

ಶ್ರೀ ಟಿ.ಬಿ. ಜಯಚಂದ್ರ:– ಅದನ್ನು ಕೂಡ ಪರೀಕ್ಷೆಗೆ ಒಳಪಡಿಸಿದ್ದೇವೆ. ಈಗ ಅದೂ ಕೂಡ ಪರೀಕ್ಷೆ ಆಗುತ್ತದೆ.

ಅಧ್ಯಕ್ಷರು:– ಮುಂದಿನದು ಮಾನ್ಯ ಬಿ.ಆರ್. ಪಾಟೀಲ್‌ರವರದು, ಅವರು ಇಲ್ಲ. ಮಾನ್ಯ ಕೆ.ಎಂ. ಶಿವಲಿಂಗೇಗೌಡರೇ, ತಾವು ಕೇಳಿ.

3. **ವಿಷಯ:**–ಅರಸೀಕೆರೆ ಪುರಸಭೆಯನ್ನು ನಗರಸಭೆಯನ್ನಾಗಿ ಮಾಡುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಮಾನ್ಯ ಅಧ್ಯಕ್ಷರೆ, ಅರಸೀಕೆರೆ ಪುರಸಭೆಯನ್ನು ನಗರಸಭೆಯನ್ನಾಗಿ ಮಾಡಬೇಕೆಂದು ಈಗಾಗಲೇ ಮಾಹಿತಿ ಬಂದಿತ್ತು. ಆದರೆ, ಮೊನ್ನೆದಿವಸ 8 ಅನ್ನು announce ಮಾಡಿದ್ದೀರಿ. ಆದರೆ, ನಮ್ಮದು ಲಿಸ್ಟ್‌ನಲ್ಲಿ 6ನೇಯದಾಗಿತ್ತು. ಆದರೆ, ನಮ್ಮದನ್ನು ಕೈಬಿಟ್ಟು ಬೇರೆವುಗಳನ್ನು ಮಾಡಿದ್ದೀರಿ. ಈ ರೀತಿಯ ತಾರತಮ್ಯ ಏಕೆ?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):– ಅರಸೀಕೆರೆ ಪುರಸಭೆಯನ್ನು ಪರಿವರ್ತಿಸುವ ಬಗ್ಗೆ ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದು, ಅದರಂತೆ ಕಡತವನ್ನು ಅನುಮೋದನೆ ಕೋರಿ ಸಚಿವ ಸಂಪುಟ ಶಾಖೆಗೆ ಸಲ್ಲಿಸಲಾಗಿದೆ. ಸಚಿವ